- ಅಡಿಕೆ ಬೆಳೆ ನಿಷೇಧದ ಕುರಿತಾಗಿ ರಾಜ್ಯ ಸರ್ಕಾರವು ಘನ ಸರ್ವೋಚ್ಚ ನ್ಯಾಯಲಯದಲ್ಲಿ ದಾಖಲಾಗಿರುವ SLP (civil) Nos 16308/07ರ ಪ್ರಕರಣದಲ್ಲಿ ರಾಜ್ಯದ ಅಡಿಕೆ ಬೆಳೆಗಾರರ ಹಿತದೃಷ್ಟಿಯಿಂದ ವಾದ ಮಂಡಿಸಲು ಸರ್ಕಾರದಿಂದ ಹಿರಿಯ ವಕೀಲರನ್ನು ಮರು ನೇಮಕ ಮಾಡಲಾಗಿದೆ.

- ಅಡಿಕೆ ಬೆಳೆಯ ನಿಷೇಧದ ಬಗ್ಗೆ ಸರ್ಕಾರದ ನಿಲುವನ್ನು ಸಮಗ್ರ ರೀತಿಯಲ್ಲಿ ಸಿದ್ಧಪಡಿಸಲು ಮತ್ತು ಅಡಿಕೆ ಬೆಳೆಯ ಆರೋಗ್ಯದಾಯಕ ವೈಜ್ಞಾನಿಕ ವರದಿಗಳನ್ನು ಕ್ರೋಢೀಕರಿಸಿಕೊಳ್ಳುವ ಸಲುವಾಗಿ ಸಂಬಂಧಿಸಿದ ವೈಜ್ಞಾನಿಕ ಸಂಸ್ಥೆ, ವಿಜ್ಞಾನಿ, ತಜ್ಞರ ಹಾಗೂ ಅಧಿಕಾರಿಗಳ ಸಭೆಯನ್ನು ದಿನಾಂಕ: 13.02.2014 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರರವರ ಅಧ್ಯಕ್ಷತೆಯಲ್ಲಿ ಜರುಗಿದ್ದು, ಸದರಿ ವಿಷಯ ಬಗ್ಗೆ ವಿವರವಾಗಿ ಚರ್ಚಿಸಲಾಗಿರುತ್ತದೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆವತಿಯಿಂದ ಘನ ಸರ್ವೋಚ್ಚ ನ್ಯಾಯಾಲಯಕ್ಕೆ ಅಫಿಡವಿಟ್ ಸಲ್ಲಿಸಲು ಕ್ರಮವಹಿಸಲಾಗುತ್ತಿದೆ.

ಜಿಲ್ಲಾ ಅಲ್ಪಸಂಖ್ಯಾತರ ಕಛೇರಿ ಸ್ಥಾಪನೆ

250(531); ಡಾ॥ ರಫೀಕ್ ಅಹ್ಮದ್ ಎಸ್. (ತುಮಕೂರು ನಗರ)

ಅ) ರಾಜ್ಯದಲ್ಲಿ ಇದುವರೆಗೆ ಎಷ್ಟು ಜಿಲ್ಲೆಗಳಲ್ಲಿ ಜಿಲ್ಲಾ ಅಲ್ಪಸಂಖ್ಯಾತರ ಕಛೇರಿಗಳನ್ನು ಸ್ಥಾಪಿಸಲಾಗಿದೆ;

ಆ) ತುಮಕೂರು ಜಿಲ್ಲೆಗೆ ಜಿಲ್ಲಾ ಅಲ್ಪಸಂಖ್ಯಾತರ ಕಛೇರಿ ಸ್ಥಾಪಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ; ಇದ್ದರೆ, ಎಷ್ಟು ಸಮಯದಲ್ಲಿ ಸ್ಥಾಪಿಸಲಾಗುದು?

ಡಾ॥ ಖಮರುಲ್ ಇಸ್ಲಾಂ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ಯಮಿಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ರಾಜ್ಯದಲ್ಲಿ ಇದುವರೆಗೆ 23 ಜಿಲ್ಲೆಗಳಲ್ಲಿ ಜಿಲ್ಲಾ ಅಲ್ಪಸಂಖ್ಯಾತರ ಕಛೇರಿಗಳನ್ನು ಸ್ಥಾಪಿಸಲಾಗಿದೆ;

ಆ) ಹೌದು ಪ್ರಸ್ತಾವನೆ ಪ್ರಗತಿಯಲ್ಲಿದೆ.

ಟಿ.ಸಿ. ಅಳವಡಿಸುವುದು

251(532); ಡಾ॥ ರಫೀಕ್ ಅಹ್ಮದ್.ಎಸ್ (ತುಮಕೂರು ನಗರ)

ಅ) ತುಮಕೂರು ತಾಲ್ಲೂಕಿನಲ್ಲಿ 1ನೇ ಜೂನ್ 2013 ರಿಂದ 31ನೇ ಮೇ–2014 ರವರೆಗೆ ಎಷ್ಟು ಟ್ರಾನ್ಸ್‌ಫಾರ್ಮರ್ (Transformers) ಗಳನ್ನು ಅಳವಡಿಸಲಾಗಿದೆ ಹಾಗೂ ಅವುಗಳ ಸಾಮರ್ಥ್ಯ ಎಷ್ಟು;

ಆ) ಟಿ.ಸಿ. ಗಳನ್ನು ಅಳವಡಿಸುವ ಮಾನದಂಡಗಳೇನು;

ಇ) ಇದಕ್ಕೆ ತಗುಲಿದ ಒಟ್ಟು ಖರ್ಚು ಎಷ್ಟು?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ತುಮಕೂರು ತಾಲೂಕಿನಲ್ಲಿ 01 ನೇ ಜೂನ್ 2013 ರಿಂದ 31ನೇ ಮೇ–2014 ರವರೆಗೆ ಒಟ್ಟು 364 ವಿದ್ಯುತ್ ಪರಿವರ್ತಕಗಳನ್ನು ಅಳವಡಿಸಲಾಗಿದೆ.

ವಿವರಗಳು ಈ ಕೆಳಗಿನಂತಿರುತ್ತದೆ.

ಪರಿವರ್ತಕಗಳ ಸಾಮರ್ಥ್ಯ	25 ಕೆವಿಎ	63 ಕೆವಿಎ	100 ಕೆವಿಎ	ಒಟ್ಟು
ಜೂನ್–13	43	16	0	59
ಜುಲೈ–13	13	3	1	17
ಆಗಸ್ಟ್–13	10	0	0	10
ಸೆಪ್ಟರ್–13	13	1	0	14
ಅಕ್ಟೋಬರ್–13	21	2	0	23
ನವೆಂಬರ್–13	14	3	1	18
ಡಿಸೆಂಬರ್–13	10	5	0	15
ಜನವರಿ–14	66	10	0	76
ಫೆಬ್ರವರಿ–14	17	3	0	20
ಮಾರ್ಚ್–14	10	0	1	11
ಏಪ್ರಿಲ್–14	35	2	0	37